1-30 P. M.

ಶ್ರೀ ಕೆ. ಎಚ್. ಪಾಟೀಲ್ :—ವೆಂಕಟಾಪುರದ ಬಿಳಿಗಿ ಟೀಚರ್ ಬಗ್ಗೆ ಅನೇಕ ದೂರುಗಳು ಬಂದಿವೆ. ಅವರ ವಿಚಾರದಲ್ಲಿ ನೇರವಾಗಿ ನಾವು ತಮ್ಮಕಡೆ ಬರಬೇಕೆಂದು ಅಪೇಕ್ಷೆ ಮಾಡದೆ, ೪ ವರ್ಷಕ್ಕಿಂತಲೂ ಮೇಲೆ ಅವರು ಅಲ್ಲಿ ಇರುವುದರಿಂದ, ಅವರನ್ನು ತೀವ್ರವಾಗಿ ತಾವಾಗಿಯೇ, ತಮ್ಮ ಇಲಾಖೆಯ ಅಧಿಕಾರಿಗಳ ಮೂಲಕ ಟ್ರಾನ್ಸ್‌ಫರ್ ಮಾಡುತ್ತೀರಾ ? ತಮ್ಮ ಪಕ್ಷದ ಒಬ್ಬ ಎಂ. ಎಲ್. ಸಿ. ಯವರು ಒಮ್ಮೆ ಟ್ರಾನ್ಸ್‌ಫರ್ ಮಾಡಿದ್ದನ್ನು ಪುನಃ ಟ್ರಾನ್ಸ್‌ಫರ್ ಮಾಡುವ ಹಾಗೆ ಹಸ್ತಕ್ಷೇಪ ಮಾಡಿದ್ದಾರೆ. ಆದ್ದರಿಂದ ಇದನ್ನು ನಿಮ್ಮ ಅಧಿಕಾರಿಗಳ ಮೂಲಕವೇ ಒಂದು ಉಚ್ಚ ಆರ್ಡರ್ ಮಾಡಿಸಿ ಅವರನ್ನು ಟ್ರಾನ್ಸ್‌ಫರ್ ಮಾಡಿಸುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ :—ಅದೇ ರೀತಿ ನಾವು ಮಾಡುತ್ತಾ ಇರುವುದು. ಕೆಲವು ಸಲ ಎಂ.ಎಲ್.ಸಿ ಗಳು ಎಂ.ಎಲ್.ಎ.ಗಳು ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡಬೇಕೆಂದು ಬರುತ್ತಾರೆ. ಇದು ಬಹಳ ಕಷ್ಟವಾದ ಪರಿಸ್ಥಿತಿ. ಕೆಲವು ಪರಿಸ್ಥಿತಿಗಳಲ್ಲಿ ಅವರನ್ನು ಅಲ್ಲಿ ಇಡಬೇಕಾಗುತ್ತದೆ. ಯಾರು ತಮ್ಮ ಕೆಲಸಕಾರ್ಯಗಳನ್ನು ತೃಪ್ತಿಕರವಾಗಿ ಮಾಡುತ್ತಿದ್ದಾರೋ, ಅವರನ್ನು ಅಲ್ಲೇ ಇಡಬಹುದು. ಆದರೆ ಯಾರು ತಂಟೆಕೋರರಾಗಿರುತ್ತಾರೋ, ಅವರನ್ನು ವರ್ಗಾವಣೆ ಮಾಡಬೇಕಾಗುತ್ತದೆ.

ಶ್ರೀ ಬಿ. ದೊಡ್ಡಬೋರೇಗೌಡ :- ಮಕ್ಕಳು ಜ್ಞಾನಾರ್ಜನಮಾಡಿ ಮುಂದೆ ಒಳ್ಳೆಯ ಪ್ರಜೆಗಳಾಗ ಬೇಕೆಂಬುದು ಶಿಕ್ಷಣ ಇಲಾಖೆಯ ಧೋರಣೆ. ಇತ್ತೀಚೆಗೆ ತಾವು ಮಂತ್ರಿಗಳಾದ ಮೇಲೆ ಆ ರೀತಿಯಾಗ ಬಹುದೆಂದು ಭಾವಿಸಿದ್ದೆವು. ಆದರೆ ಅದು ಆಗಿಲ್ಲ. ಒಂದೇ ಒಂದು ಉಪಾಧ್ಯಾಯನನ್ನು ಒಂದು ವರ್ಷದಲ್ಲಿ ಮೂರು ನಾಲ್ಕು ಬಾರಿ ವರ್ಗ ಮಾಡಿರತಕ್ಕ ದೃಷ್ಟಾಂತಗಳಿವೆ, ಮತ್ತು ೨೫ ವರ್ಷಗಳ ವರೆಗೂ ಒಂದೇ ಕಡೆಯಲ್ಲಿ ಒಬ್ಬ ಉಪಾಧ್ಯಾಯನನ್ನು ಇಟ್ಟಿರುವ ಉದಾಹರಣೆ ಇದೆ. ಇದರ ಬಗ್ಗೆ ಇದನ್ನು ಸುಧಾರಣೆ ಮಾಡಲು ತಾವು ಏನು ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ :—ಇಂತಹ ವಿಷಯಗಳನ್ನು ಶ್ರೀಮಾನ್ ದೊಡ್ಡಬೋರೆಗೌಡರು ಗಮನಕ್ಕೆ ತಂದರೆ ನಿಜವಾಗಿಯೂ ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

TAKING OVER OF PRIMARY SCHOOLS RUN BY PRIVATE MANAGEMENTS

347. SRI R. G. WALI (Hubli).—

Will the Minister for Education be pleased to state :—

(*a*) when the final decision to regroup zone or districts for administrative convenience in the matter of taking over Primary schools run by private management by Government will be taken ;

(*b*) whether rent due to the owners of the buildings occupied by the Primary schools belonging to Private Individuals or to the Municipalities have been paid;

(*c*) if not, when the same will be paid ?

SRI K. V. SHANKARA GOWDA (Minister for Education):—

(*a*) Government have not taken over all schools run by private management. As regards reorganisation and strengthening of Inspectorate of Department of Public Instruction, orders have been issued on 22nd June 1970.